# ಅವ್ವ

೧. ಕವಯಿತ್ರಿಯು ತಾಯಿಯ ಪಾದಕ್ಕೆ ಏನು ತರುತ್ತಾಳೆ ?

ಉ: ಕವಯಿತ್ರಿಯು ತಾಯಿಯ ಪಾದಕ್ಕೆ ಬೊಗಸೆ ತುಂಬಾ ಹೂವನ್ನು ತರುತ್ತಾಳೆ .

೨. ಜಗತ್ತಿನಲ್ಲಿ ಮಿಗಿಲಾದುದು ಯಾವುದು ?

ಉ: ಜಗತ್ತಿನಲ್ಲಿ ಎಲ್ಲಕ್ಕೂ ಮಿಗಿಲಾದುದು ತಾಯಿಯ ಹರಕೆ.

೩. ತಾಯಿ ಮಗುವಿಗೆ ಏನನ್ನು ಕಲಿಸುತ್ತಾಳೆ ?

ಉ: ತಾಯಿ ಮಗುವಿಗೆ ವಿದ್ಯೆ ಕಲಿಸಿ , ಬುದ್ಧಿ ನೀಡಿ , ಸಿದ್ಧಿಪಡೆಯುವಂತೆ ಮಾಡುತ್ತಾಳೆ .

೪. ಮಗು ಬಿದ್ದಾಗ ತಾಯಿ ಹೇಗೆ ರಮಿಸುತ್ತಾಳೆ?

ಉ: ಮಗು ಬಿದ್ದಾಗ ತಾಯಿ ಓಡಿಬಂದು ಎತ್ತಿಕೊಂಡು ಸಂತೈಸಿ , ಮುದ್ದಾಡುತ್ತಾಳೆ .

೫. ತಾಯಿ ಮಗುವಿಗೆ ಏನನ್ನು ಕುಡಿಸುತ್ತಾಳೆ?

ಉ: ತಾಯಿ ಮಗುವಿಗೆ ತನ್ನ ಎದೆಯ ಹಾಲನ್ನು ಕುಡಿಸುತ್ತಾಳೆ .

**ಕೃತಿಕಾರರ ಪರಿಚಯ:** ಲಲಿತಾ ಕೊಟ್ರಪ್ಪ ಹೊಸಪ್ಯಾಟಿ ೧೯೬೪ ರಲ್ಲಿ ಜನಿಸಿದರು. ತಂದೆ ಕೊಟ್ರಪ್ಪ. ತಾಯಿ ನೀಲಮ್ಮ. ಸರ್ಕಾರಿ ಪ್ರೌಢಶಾಲೆ ಹಿರೇಬಾದವಾಡಗಿ ಹುನಗುಂದ ತಾ. ಬಾಗಲಕೋಟೆ ಜಿಲ್ಲೆಯಲ್ಲಿ ಮುಖ್ಯೋಪಾಧ್ಯಾಯಿನಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಕಲ್ಪನಾಳಿಗೊಂದು ಎದೆಹಾಡು, ಹೂ ಮಾರುವ ಹುಡುಗಿ ಎಂಬ ಮಕ್ಕಳ ಕವನ ಸಂಕಲನ, ಪಟ್ಟಣಕ್ಕೆ ಬಂದ ಪುಟ್ಟ ಗುಬ್ಬಿ- ಮಕ್ಕಳ ನಾಟಕ, ಮಳೆಯಾದಳು ನೀರಾ, ಗೆಳೆಕಾರ ಹಕ್ಕಿಗಳು, ಚಂದ್ರಚುಕ್ಕಿಗಳು ಎಂಬ ಮಕ್ಕಳ ಕಥಾ ಸಂಕಲನಗಳನ್ನು ರಚಿಸಿದ್ದಾರೆ.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ